

ಸಂಪಾದಕೀಯ

# ಶ್ರೀರಾಮಕೃಷ್ಣರ ವೇದಾಂತ – ೨

**ವೇ**ದಾಂತ ತತ್ತ್ವಗಳ ಪ್ರಕಾರ, ಪ್ರಪಂಚದ ಎಲ್ಲ ಗೊಂದಲಗಳಿಗೂ ಮೂಲ ಕಾರಣ ಅಜ್ಞಾನ. ಇದು ವ್ಯಕ್ತಿ-ವ್ಯಕ್ತಿಗಳಲ್ಲಿ ಆತ್ಯಂತಿಕ ಸತ್ಯವನ್ನು ಕುರಿತ ಅಜ್ಞಾನವಿರಬಹುದು, ಅಥವಾ ಸಮಸ್ತ ಸೃಷ್ಟಿಯನ್ನು ಆವರಿಸಿರುವ ವ್ಯಾಪಕ ಅಜ್ಞಾನವಿರಬಹುದು. ಅವಿದ್ಯೆ, ಮಾಯೆ – ಎಂಬ ಶಬ್ದಗಳಿಂದಲೂ ಕರೆಯಲ್ಪಡುವ ಈ ಅಜ್ಞಾನವು ಆಧ್ಯಾತ್ಮಿಕ ಸಾಧನೆಗಳಿಂದ ನಾಶವಾಗುವುದು. ಆಗ ಆತ್ಮಸಾಕ್ಷಾತ್ಕಾರವು ತಾನೇತಾನಾಗಿ ಉಂಟಾಗುವುದು. ಗುರುವಿನ ಉಪದೇಶ, ಭಗವತ್ಕೃಪೆ, ಸ್ವಪ್ರಯತ್ನ ಮುಂತಾದವು ಸಾಕ್ಷಾತ್ಕಾರದ ಹಾದಿಯಲ್ಲಿ ವಿಶೇಷ ಸಹಾಯ ಮಾಡುತ್ತವೆ. ಶಾಸ್ತ್ರ ಮತ್ತು ಗುರುವಾಕ್ಯ – ಇವುಗಳಿಂದ ಸಾಧಕನು ಗುರಿ ತಲುಪುತ್ತಾನೆ ಎಂದು ವೇದಾಂತವು ಖಚಿತವಾಗಿ ಹೇಳುತ್ತದೆ. ಭಗವತ್ಕೃಪೆ ಮತ್ತು ವಿವೇಕ-ವೈರಾಗ್ಯಗಳಿಂದ ಮುಕ್ತಿ ಲಭಿಸುತ್ತದೆ ಎಂದು ಶ್ರೀರಾಮಕೃಷ್ಣರು ಬೋಧಿಸುತ್ತಾರೆ.

## ಬಂಧನ-ಮುಕ್ತಿ

ಸಂಸಾರದ ಬಂಧನ ಹಾಗೂ ಅದರಿಂದ ಮುಕ್ತಿ – ಇದು ಜೀವಿಗಳು ಅರಿತುಕೊಳ್ಳಬೇಕಾದ ಸಂಗತಿ. ವ್ಯಕ್ತಿಯೊಬ್ಬನೂ ತನ್ನ ಕರ್ಮಗಳ ಕಾರಣದಿಂದ ಬಂಧನಕ್ಕೊಳಗಾಗುತ್ತಾನೆ; ಅವಿದ್ಯಾ-ಕಾಮ-ಕರ್ಮ ಇವುಗಳ ಗತಿಯಲ್ಲಿ ಸಿಲುಕಿಕೊಳ್ಳುತ್ತಾನೆ. ವಿವೇಕ, ವೈರಾಗ್ಯಗಳೇ ಇದರಿಂದ ಹೊರಬರಲು ಮಾರ್ಗವೆಂದು ವೇದಾಂತ ಗ್ರಂಥಗಳು ಸಾರುತ್ತವೆ. ಶ್ರೀರಾಮಕೃಷ್ಣರು ಒಂದು ಉಪಮೆಯ ಮೂಲಕ ಇದನ್ನು ಹೀಗೆ ವಿವರಿಸುತ್ತಾರೆ:

‘‘ಈ ಜಗತ್ತು ಮೀನುಬಲೆ ಇದ್ದ ಹಾಗೆ. ಜೀವ ಮೀನು ಇದ್ದ ಹಾಗೆ. ಯಾರ ಮಾಯೆಯಿಂದ ಈ ಜಗತ್ತು ಸ್ಪಷ್ಟವಾಗಿದೆಯೋ ಆ ಭಗವಂತ ಬೆಸ್ತ ಇದ್ದಹಾಗೆ. ಬೆಸ್ತನ ಬಲೆಗೆ ಮೀನು ಬಿದ್ದಾಗ ಕೆಲವು ಮೀನುಗಳು ಬಲೆಯನ್ನು ಕತ್ತರಿಸಿ ಓಡಿಹೋಗಲು, ಅಂದರೆ ಬಂಧನದಿಂದ ಪಾರಾಗಲು ಯತ್ನಿಸುತ್ತವೆ. ಇವನ್ನೇ ಮುಮುಕ್ಷು ಜೀವಕ್ಕೆ ಹೋಲಿಸಬಹುದು. ಬಂಧನದಿಂದ ಪಾರಾಗಲು ಯತ್ನಿಸಿದ ಮೀನುಗಳಲ್ಲಿ ಎಲ್ಲವೂ ಪಾರಾಗಲಾರವು. ಎಲ್ಲೋ ಮೂರೋ ನಾಲ್ಕೋ ಮೀನು ‘ದಬಕ್’ ಅಂತ ಶಬ್ದ ಮಾಡಿ ಓಡಿಹೋಗುತ್ತವೆ. ಆಗ ಜನ ಹೇಳುತ್ತಾರೆ: ‘ಓ, ಅಲ್ಲಿ ಒಂದು ಬಹಳ ದೊಡ್ಡದು ಓಡಿಹೋಗುತ್ತಿದೆ!’ ಈ ಮೂರೋ ನಾಲ್ಕೋ ಮೀನುಗಳನ್ನು ಮುಕ್ತಜೀವರಿಗೆ ಹೋಲಿಸಬಹುದು. ಕೆಲವು ಮೀನುಗಳು ಸ್ವಾಭಾವಿಕವಾಗಿಯೇ ಅಷ್ಟು ಎಚ್ಚರಿಕೆಯುಳ್ಳವು; ಅವು ಎಂದಿಗೂ ಬಲೆಗೆ ಬೀಳುವುದೇ ಇಲ್ಲ. ಆದರೆ ಮೀನುಗಳಲ್ಲಿ ಅಧಿಕಾಂಶ ಬಲೆಗೆ ಬೀಳುತ್ತವೆ; ಆದರೂ ಅವಕ್ಕೆ ತಾವು ಬಲೆಗೆ ಬಿದ್ದಿರುವುದರ ಮತ್ತು ಒಡನೆ ಸಾಯಬೇಕಾಗಿರುವುದರ ಪ್ರಜ್ಞೆಯೇ ಇರುವುದಿಲ್ಲ. ಬಲೆಗೆ ಬಿದ್ದೊಡನೆಯೇ ಅವು ನೇರವಾಗಿ ಬಲೆಯೊಡನೆ ಓಡಿಹೋಗಿ ಬದಿಯನ್ನು ಹೊಕ್ಕು ತಮ್ಮನ್ನು ಮರೆಮಾಚಿಕೊಳ್ಳಲು ಪ್ರಯತ್ನ ಮಾಡುತ್ತವೆ. ಬಂಧನದಿಂದ ಪಾರಾಗಲು ಸ್ವಲ್ಪವೂ ಪ್ರಯತ್ನ ಮಾಡುವುದಿಲ್ಲ. ಅದಕ್ಕೆ ಬದಲು ಬದಿಯ ಇನ್ನೂ ಆಳಕ್ಕೆ ಹೋಗುತ್ತವೆ. ಇವನ್ನೇ ಬದ್ಧ ಜೀವರಿಗೆ ಹೋಲಿಸಬಹುದು. ಈ ಮೀನು ಬಲೆಗೆ ಸಿಕ್ಕಿಬಿದ್ದಿದೆ, ಆದರೂ ಇದು ಭಾವಿಸುತ್ತಿದೆ; ತಾನು ಸುರಕ್ಷಿತನಾಗಿದ್ದೇನೆ ಎಂಬುದಾಗಿ. ಬದ್ಧಜೀವರು ಜಗತ್ತಿನಲ್ಲಿ , ಎಂದರೆ ಕಾಮಕಾಂಚನದಲ್ಲಿ ಆಸಕ್ತರಾಗಿಬಿಟ್ಟಿದ್ದಾರೆ; ಕಳಂಕ ಸಾಗರದಲ್ಲಿ ಬಹಳವಾಗಿ ಮಗ್ನರಾಗಿಬಿಟ್ಟಿದ್ದಾರೆ. ಆದರೂ ಭಾವಿಸುತ್ತಾರೆ, ತಾವು ಸೌಖ್ಯದಿಂದಿದ್ದೇವೆ ಎಂಬುದಾಗಿ. ಮುಮುಕ್ಷುಗಳಿಗೆ ಮತ್ತು ಮುಕ್ತರಿಗೆ ಈ ಜಗತ್ತು ದೊಡ್ಡ ಆಳವಾದ ಬಾವಿಯ ಹಾಗೆ ಕಾಣುತ್ತದೆ; ಹೇಯವಾಗಿಯೇ ಕಾಣುತ್ತದೆ. ಅದಕ್ಕಾಗಿಯೇ ಕೆಲವರು ಬ್ರಹ್ಮಜ್ಞಾನ ದೊರೆತನಂತರ, ಭಗವಂತನ ಸಾಕ್ಷಾತ್ಕಾರ ದೊರೆತನಂತರ ಶರೀರವನ್ನು ತ್ಯಜಿಸಿಬಿಡುತ್ತಾರೆ.’’

*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೨೦)*

ವೈರಾಗ್ಯ , ವ್ಯಾಕುಲತೆ ಹೇಗೆ ಒಬ್ಬ ವ್ಯಕ್ತಿಯನ್ನು ಮುಕ್ತಿಯೆಡೆಗೆ ಕರೆದೊಯ್ಯುವುದು ಎಂಬುದನ್ನು ಅವರು ಹೀಗೆ ವಿವರಿಸುತ್ತಾರೆ:

‘‘ಭಗವಂತನ ಕೃಪೆಯಿಂದ ಆತನಲ್ಲಿ ತೀವ್ರ ವೈರಾಗ್ಯ ಉಂಟಾದದ್ದೇ ಆದರೆ, ಆಗ ಆತ ಕಾಮಕಾಂಚನಾಸಕ್ತಿಗಳಿಂದ ಮುಕ್ತನಾಗಬಲ್ಲ. ಯಾವುದಕ್ಕೆ ತೀವ್ರ ವೈರಾಗ್ಯ ಅಂತ ಹೆಸರು? ಮಂದ ವೈರಾಗ್ಯವಿರುವವನು ಹೇಳುತ್ತಾನೆ: ‘ಎಲ್ಲಾ ಸಕಾಲಕ್ಕೆ ನಿಧಾನವಾಗಿ ಬರಲಿ; ಈಗ ಸದ್ಯ ನಾನು ಸುಮ್ಮನೆ ಭಗವಂತನ ನಾಮಜಪ ಮಾಡುತ್ತಿರುತ್ತೇನೆ.’ ಆದರೆ ಯಾರಲ್ಲಿ ತೀವ್ರ ವೈರಾಗ್ಯ ಉಂಟಾಗಿದೆಯೋ, ಆತ ಹೇಗೆ ತಾಯಿ ತನ್ನ ಮಗುವಿಗಾಗಿ ವ್ಯಾಕುಲಳಾಗಿರುತ್ತಾಳೊ ಹಾಗೆಯೇ ಭಗವಂತನಿಗಾಗಿ ಬಹಳವಾಗಿ ವ್ಯಾಕುಲಪಡುತ್ತಿರುತ್ತಾನೆ. ತೀವ್ರ ವೈರಾಗ್ಯವುಳ್ಳವನಿಗೆ ಭಗವಂತನ ಹೊರತು ಇನ್ನು ಏನೂ ಬೇಕೆನಿಸುವುದಿಲ್ಲ.’’ *(ಅಲ್ಲೇ, ಪು.೧೨೪)*

ಅಜ್ಞಾನ ಆವರಿಸಿದಾಗ ಪ್ರಪಂಚದ ಮೋಹದಲ್ಲಿ ಸಿಲುಕುವ ಮನುಷ್ಯನು ಮುಕ್ತಿ ದೊರೆತೊಡನೆ ಸತ್ಯವನ್ನು ಅರಿಯುತ್ತಾನೆ. ಇದನ್ನು ಶ್ರೀರಾಮಕೃಷ್ಣರು ವಿವರಿಸುವ ಬಗೆ ಹೀಗೆ:

''ಆತ ನಮ್ಮನ್ನು ತನ್ನ ಮಾಯೆಯಿಂದ ಮುಗ್ಧಗೊಳಿಸಿ ಇಟ್ಟಿದ್ದಾನೆ. ಕೆಲವು ವೇಳೆ ನಮ್ಮನ್ನು ಎಚ್ಚರಗೊಳಿಸುತ್ತಾನೆ, ಇನ್ನು ಕೆಲವು ವೇಳೆ ನಮಗೆ ಮರೆವು ತರುತ್ತಾನೆ. ಈ ನಿಮಿಷ ಅಜ್ಞಾನ ಒಮ್ಮೆಗೇ ಹೊರಟುಹೋಗುತ್ತದೆ. ಮರು ನಿಮಿಷ ಮತ್ತೆ ಬಂದು ಮುಚ್ಚಿಕೊಳ್ಳುತ್ತದೆ. ಪಾಚಿ ಮುಚ್ಚಿಕೊಂಡಿರುವ ಕೊಳಕ್ಕೆ ಕಲ್ಲು ಬಿಸಾಡಿದರೆ, ನೀರಿನ ಸ್ವಲ್ಪಭಾಗ ಕಾಣಿಸಿಕೊಳ್ಳುತ್ತದೆ. ಆದರೆ ಕೆಲವು ಕ್ಷಣದೊಳಗೇ ಮತ್ತೆ ಪಾಚಿ ನರ್ತಿಸುತ್ತಾ ಬಂದು ಆ ಭಾಗವನ್ನು ಮುಚ್ಚಿಕೊಂಡು ಬಿಡುತ್ತದೆ.''

*(ಅಲ್ಲೇ, ಪು.೨೩೩)*

### ಸಾಧನೆಯ ಬಗೆಗಳು

ವೇದಾಂತದಲ್ಲಿ ಹಲವಾರು ಸಾಧನೆಯ ಮಾರ್ಗಗಳಿವೆ. ವೇದ-ಉಪನಿಷತ್ತುಗಳಲ್ಲಿ ಜ್ಞಾನ, ಭಕ್ತಿ ಮಾರ್ಗಗಳು ಉಗಮ ಹೊಂದಿವೆ; ಆದರೂ ಅಲ್ಲಿ ವಿಚಾರ ಅಥವಾ ಜ್ಞಾನಮಾರ್ಗಕ್ಕೆ ಪ್ರಾಧಾನ್ಯತೆಯಿದೆ. ಪ್ರಾಚೀನ ಕಾಲದಲ್ಲಿ ಬೆಳೆದುಬಂದ ಸಾಧನಾ ಮಾರ್ಗಗಳನ್ನೆಲ್ಲ ವಿವರಿಸಿ, ಸಮನ್ವಯಗೊಳಿಸಿದ್ದು ಭಗವದ್ಗೀತೆ. ಸಾಂಖ್ಯ, ಯೋಗ, ಕರ್ಮ, ಧ್ಯಾನ, ಭಕ್ತಿ, ಶರಣಾಗತಿ - ಇವೆಲ್ಲ ಸಾಧನೆಯ ಬಗೆಗಳು; ಅವನ್ನೆಲ್ಲ ಇಲ್ಲಿ 'ಯೋಗ'ವೆಂದು ಕರೆಯಲಾಗಿದೆ. ಇನ್ನು ಮುಂದಕ್ಕೆ ಬೆಳೆದು ಬಂದ ಅದ್ವೈತ ದರ್ಶನವು ಪ್ರಧಾನವಾಗಿ ಜ್ಞಾನಮಾರ್ಗವನ್ನೂ, ವಿಶಿಷ್ಟಾದ್ವೈತ ಮತ್ತು ದ್ವೈತ ದರ್ಶನಗಳು ಭಕ್ತಿಮಾರ್ಗವನ್ನೂ ಪುರಸ್ಕರಿಸಿವೆ. ಒಟ್ಟಾರೆಯಾಗಿ ವೇದಂತವು ಜ್ಞಾನ, ಭಕ್ತಿ ಹಾಗೂ ಯೋಗ - ಇವನ್ನೆಲ್ಲ ಸಾಕ್ಷಾತ್ಕಾರಕ್ಕೆ ಸಾಧನ ಮಾರ್ಗವಾಗಿ ಸ್ವೀಕರಿಸಿದೆ. ಶ್ರೀರಾಮಕೃಷ್ಣರು ಸಾಧನೆಯ ಮಾರ್ಗಗಳಾಗಿ ಈ ಎಲ್ಲವನ್ನೂ ಹೆಸರಿಸುತ್ತಾರೆ. ಆದರೆ ಅವರು ವಿಶೇಷವಾಗಿ ಎಲ್ಲರಿಗೂ ಯುಕ್ತವೆನ್ನುವುದು ಭಕ್ತಿಮಾರ್ಗವನ್ನು. ಅವರು ಹೇಳುತ್ತಾರೆ:

''ಜ್ಞಾನಯೋಗ ಬಹಳ ಕಠಿಣ. ದೇಹಾತ್ಮಬುದ್ಧಿ ಹೋಗದ ಹೊರತು ಜ್ಞಾನ ಉಂಟಾಗುವುದಿಲ್ಲ. ಕಲಿಯುಗದಲ್ಲಿ ಅನ್ನಗತಪ್ರಾಣ. ದೇಹಾತ್ಮಬುದ್ಧಿ, ಅಹಂಬುದ್ಧಿ ಹೋಗದು. ಆದ್ದರಿಂದ ಈ ಯುಗಕ್ಕೆ ಭಕ್ತಿಯೋಗವೇ ಔಷಧ. ಇದು ಬಹಳ ಸುಲಭವಾದ ಮಾರ್ಗ. ಹೃತ್ಪೂರ್ವಕ ವ್ಯಾಕುಲತೆಯಿಂದ ಆತನ ನಾಮಗುಣಕೀರ್ತನೆ ಮಾಡು, ಪ್ರಾರ್ಥನೆ ಮಾಡು, ಆತ ದೊರೆತುಬಿಡುತ್ತಾನೆ. ಇದರಲ್ಲಿ ಯಾವ ಸಂದೇಹವೂ ಇಲ್ಲ.'' *(ಅಲ್ಲೇ, ಪು.೧೩೦)*

ಶ್ರೀರಾಮಕೃಷ್ಣರ ಬೋಧನೆಯನ್ನು ಅನುಸರಿಸಿ ಸ್ವಾಮಿ ವಿವೇಕಾನಂದರು ನಾಲ್ಕು ಯೋಗಗಳ ಸಾಧನಾಮಾರ್ಗವನ್ನು ಪ್ರಚುರಪಡಿಸಿದರು. ಶ್ರೀರಾಮಕೃಷ್ಣರು ಜ್ಞಾನಮಿಶ್ರಿತ ಭಕ್ತಿ ಅಗತ್ಯವೆಂದು ಕೆಲವೆಡೆ ಹೇಳುತ್ತಾರೆ. ಅಂದರೆ, ಭಕ್ತನಿಗೆ ಜ್ಞಾನವೂ ಅಗತ್ಯ ಹಾಗೂ ಸಹಾಯಕ. ಇದು ಸಾಧನ ಮಾರ್ಗಗಳ ಸಮನ್ವಯವಾಗಿ ಕಂಡುಬರುತ್ತದೆ. ಇದು ಸ್ವಾಮಿ ವಿವೇಕಾನಂದರ ನಾಲ್ಕು ಯೋಗಗಳ ಸಮನ್ವಯದಲ್ಲಿ ಹೆಚ್ಚು ಸ್ಪಷ್ಟವಾಗಿ ಪ್ರಕಟಗೊಂಡಿತು.

ಶ್ರೀರಾಮಕೃಷ್ಣರು ಯಾವುದೇ ತತ್ತ್ವ, ಪಂಥ ಅಥವಾ ವಿಧಾನಗಳಿಗೆ ಸೀಮಿತವಾಗಿರಲಿಲ್ಲ; ಅವರು ಎಲ್ಲದರ ಸಮನ್ವಯವನ್ನು ಇಷ್ಟಪಡುತ್ತಿದ್ದರು ಎಂದು ನಾವು ಈ ಹಿಂದೆ ನೋಡಿದ್ದೇವೆ. ಈ ಮೂಲಭೂತ ಸಂಗತಿಯನ್ನು ಸಾಧನೆಯ ವಿಷಯದಲ್ಲೂ ಅವರು ಹೊಂದಿದ್ದರು. ಆದರೆ ಅವರು ಸಾಧನೆಯ ಬಗ್ಗೆ ಹೇಳುತ್ತ ಏಕನಿಷ್ಠೆಯ ಪ್ರಾಮುಖ್ಯತೆಯನ್ನು ಕೂಡ ಒತ್ತಿ ಹೇಳುತ್ತಾರೆ. ಹಲವು ಕಡೆ ಬಾವಿ ತೋಡುವವರ ದೃಷ್ಟಾಂತವನ್ನು ಹೇಳುತ್ತ, ಒಂದೇ ಕಡೆ ಆಳವಾಗಿ ಬಾವಿ ತೋಡುವವನಿಗೆ ಮಾತ್ರವೇ ನೀರು ಸಿಗುತ್ತದೆ ಎನ್ನುತ್ತಾರೆ. ಹಿಡಿದ ಮಾರ್ಗವನ್ನೇ ಎಡೆಬಿಡದೆ ಅನುಸರಿಸುವುದು, ತೀವ್ರ ವೈರಾಗ್ಯವನ್ನು ಹೊಂದಿದವನು ಸತತ ಪರಿಶ್ರಮದಿಂದ ಗುರಿ ತಲುಪುವುದು - ಇವು ಏಕನಿಷ್ಠೆಗೆ ಉತ್ತಮ ಉದಾಹರಣೆ. 'ಆಳಕ್ಕೆ ಮುಳುಗಿ, ಮೇಲೆಯೆ ತೇಲಿದರೆ ಏನಾದೀತು? ಎಲ್ಲವನ್ನೂ ತ್ಯಜಿಸಿ ಕೆಲವು ದಿವಸಗಳ ಮಟ್ಟಿಗೆ ನಿರ್ಜನ ಪ್ರದೇಶದಲ್ಲಿದ್ದು  ಹದಿನಾರಾಣೆ ಮನಸ್ಸಿಟ್ಟು ಆತನನ್ನು ಕರೆಯಿರಿ' ಎನ್ನುತ್ತ ಶ್ರೀರಾಮಕೃಷ್ಣರು ಈ ಹಾಡನ್ನು ಹಾಡುತ್ತಿದ್ದರು:

''ಮುಳುಗು ಮುಳುಗು ಮನವೇ—
ಹಿರಿಯೊಲವಿನ ಕಡಲಾಳಕೆ
ಮುಳುಗು ಮುಳುಗು ಒಳಗೇ,
ತಲಾತಲ ಪಾತಾಲಕೆ ಮುಳುಗಲು
ಮುತ್ತು ರತುನಗಳ ನೀ ತರುವೆ...''

*(ಶ್ರೀರಾಮಕೃಷ್ಣ ವಚನವೇದ, ಸಂ. ೨, ಪು.೪೮)*

### ಏಕತೆ ಮತ್ತು ಸಾಮರಸ್ಯ

ಪ್ರಪಂಚದಲ್ಲಿ ಕಂಡು ಬರುವ ಎಲ್ಲ ವೈವಿಧ್ಯತೆಗಳ ನಡುವೆ ಒಂದು ಏಕತೆಯನ್ನು ಕಾಣುವ ದೃಷ್ಟಿಕೋನವೇ ವೇದ, ಉಪನಿಷತ್ತುಗಳ ಮೂಲಸೂತ್ರವೆನ್ನಬಹುದು. ಈ ಏಕತೆ ಕೇವಲ ವ್ಯಕ್ತ ಪ್ರಪಂಚಕ್ಕೆ ಮಾತ್ರ ಸೀಮಿತವಾಗಿರದೆ, ಎಲ್ಲವನ್ನೂ ಹಿಡಿದಿಡುವ ಆತ್ಮತತ್ತ್ವದ ನೈಜ ಸ್ವರೂಪವೇ ಆಗಿದೆ. **'ಅನೇಜದೇಕಂ ಮನಸೋ ಜವೀಯೋ' 'ಸ ಏಕಃ । ಯಶ್ಚಾಸಾವಾದಿತ್ಯೇ' 'ಏಕೋ ವಶೀ ಸರ್ವಭೂತಾಂತರಾತ್ಮಾ'** ಮೊದಲಾದ ಶ್ರುತಿವಾಕ್ಯಗಳಲ್ಲಿ ಆತ್ಮನ ಏಕತತ್ತ್ವವು ಹೇಳಲ್ಪಟ್ಟಿದೆ. **'ಏಕಂ ಸತ್ ವಿಪ್ರಾಃ ಬಹುಧಾ ವದಂತಿ'** ಎಂಬ ಹೇಳಿಕೆಯಂತೂ ಸ್ವಾಮಿ ವಿವೇಕಾನಂದರ ಭಾಷಣಗಳ ಮೂಲಕ ಜಗದ್ವಿಖ್ಯಾತವಾಗಿದೆ. ಆದರೆ ಈ ತತ್ತ್ವವು ಹೇಗೆ ಶ್ರೀರಾಮಕೃಷ್ಣರ ನುಡಿಗಳಲ್ಲಿ ವ್ಯಕ್ತವಾಗಿದೆ ಎಂಬುದನ್ನೀಗ ನೋಡೋಣ.

ಶ್ರೀರಾಮಕೃಷ್ಣರು ಎಲ್ಲ ಬಗೆಯ ಆಧ್ಯಾತ್ಮಿಕ ಮಾರ್ಗಗಳಲ್ಲೂ ಸಾಧನೆ ಮಾಡಿ ಗುರಿ ತಲುಪುವ ಬಗೆಯನ್ನು ಕಂಡುಕೊಂಡಿದ್ದರು. ಶಾಂತ, ಸಖ್ಯ, ವಾತ್ಸಲ್ಯ, ದಾಸ್ಯ, ಮಧುರ ಭಾವಗಳಿಂದ ಭಕ್ತಿಮಾರ್ಗದ ಸಾಧನೆಗಳನ್ನೂ, ವೇದಾಂತ ಸಾಧನೆಯ ಮೂಲಕ ಜ್ಞಾನಮಾರ್ಗವನ್ನೂ, ತಂತ್ರಸಾಧನೆಯ ಮೂಲಕ ಮಾತೃಭಾವದ ಸಾಧನೆಯನ್ನೂ ಅವರು ಮಾಡಿದರು; ಎಲ್ಲ ಮಾರ್ಗಗಳ ಚರಮಸೀಮೆಯನ್ನು ತಲುಪಿದರು. ಅಂತಿಮವಾಗಿ ಅವರು ಇಸ್ಲಾಂ, ಕ್ರೈಸ್ತಧರ್ಮಗಳ ಪದ್ಧತಿ ಪ್ರಕಾರ ಸಾಧನೆಯನ್ನೂ ಮಾಡಿದರು. ಇಷ್ಟೊಂದು ವಿಸ್ತಾರವಾದ ಅನುಭವಗಳ ನಂತರ ತಾವು ಕಂಡುಕೊಂಡ ಸತ್ಯವನ್ನು 'ಎಷ್ಟು ಮತಗಳೋ ಅಷ್ಟು ಪಥಗಳು' ಎಂಬುದಾಗಿ ಜಗತ್ತಿಗೆ ಸಾರಿದರು: ಪ್ರತಿಯೊಂದು ಧರ್ಮ, ಪಂಥ, ಮಾರ್ಗಗಳೂ ಒಂದೇ ಭಗವಂತನೆಡೆಗೆ ಸಾಗಲು ಇರುವ ಮಾರ್ಗ; ಅವುಗಳನ್ನು ಅನುಸರಿಸಿ ಭಗವಂತನನ್ನು ಕಾಣುವುದೇ ಮಾನವ ಜೀವನದ ಗುರಿ. ಆದ್ದರಿಂದ ಒಂದು ಮಾರ್ಗವನ್ನು ಹಿಡಿದು ಮುಂದುವರಿಯಿರಿ, ಆದರೆ ಇತರ ಮಾರ್ಗಗಳನ್ನು ದೂಷಿಸಬೇಡಿ ಎನ್ನುತ್ತಾರೆ ಶ್ರೀರಾಮಕೃಷ್ಣರು. ಈ ಉಪದೇಶದಲ್ಲಿ ಧರ್ಮಸಮನ್ವಯವಿದೆ, ಏಕನಿಷ್ಠೆಯಿದೆ ಹಾಗೂ ಪರಸ್ಪರ ಹೊಂದಾಣಿಕೆಯ ಜೀವನಧರ್ಮವಿದೆ.

## ಸಾಕಾರ, ನಿರಾಕಾರ ಭಗವಂತ

ಹಿಂದೂಧರ್ಮದ ವಿಶೇಷತೆಯೇನೆಂದರೆ, ಅದು ಹಲವು ವಿಧದ ಸಾಧಕರಿಗೆ ಯೋಗ್ಯವಾದ ಮಾರ್ಗಗಳನ್ನು ರೂಪಿಸಿರುವುದು. ಮಾನವರಲ್ಲಿ ವೈವಿಧ್ಯಮಯವಾದ ಸ್ವಭಾವವುಳ್ಳವರಿದ್ದಾರೆ, ವಿವಿಧ ಸ್ತರದ ಮಾನಸಿಕ ಅವಸ್ಥೆಯವರಿದ್ದಾರೆ. ಕೆಲವರಲ್ಲಿ ಭಾವುಕತೆ ಹೆಚ್ಚು, ಕೆಲವರಲ್ಲಿ ಕ್ರಿಯಾಶೀಲತೆ ಹೆಚ್ಚು, ಇನ್ನು ಕೆಲವರಿಗೆ ಪ್ರಚಂಡ ಬುದ್ಧಿಶಕ್ತಿ ಕೆಲಸ ಮಾಡುತ್ತದೆ. ಆದ್ದರಿಂದ ಎಲ್ಲರಿಗೂ ಒಂದೇ ರೀತಿಯ ಆಧ್ಯಾತ್ಮಿಕ ಸಾಧನೆ ಸಹಜವಲ್ಲ. ಯಾರಿಗೆ ಯಾವ ಮಾರ್ಗ ಸೂಕ್ತವೋ ಅದನ್ನು ಆಯ್ಕೆ ಮಾಡಬಹುದು. ಈ ಸ್ವಾತಂತ್ರ್ಯ ಹಾಗೂ ಆಯ್ಕೆಯ ಅವಕಾಶವನ್ನು ಹಿಂದೂಧರ್ಮ ನೀಡುತ್ತದೆ. ಇದಕ್ಕನುಗುಣವಾಗಿ ರೂಪಿತವಾದ ಸಾಧನೆಯ ವಿಧಾನಗಳಿಗೆ ಮೂಲ ಯಾವುದು ಎಂದು ಹುಡುಕುತ್ತ ಹೋದರೆ, ವೇದಗಳಲ್ಲೇ ಅವುಗಳ ಕುರುಹು ಕಂಡುಬರುತ್ತದೆ. ಪರಬ್ರಹ್ಮನನ್ನು ಸಗುಣ, ನಿರ್ಗುಣ ಹಾಗೂ ಸಾಕಾರ, ನಿರಾಕಾರ ಎಂದು ಉಪಾಸನೆ ಮಾಡುವ ವಿಧಾನ ಅಲ್ಲಿ ಕಂಡುಬರುತ್ತದೆ. ವೈದಿಕ ದೇವತೆಗಳಾದ ಇಂದ್ರ, ಅಗ್ನಿ, ವರುಣ, ವಿಶ್ವೇದೇವತೆ – ಇವುಗಳೆಲ್ಲ ಸಾಕಾರ ಹಾಗೂ ಸಗುಣ ಉಪಾಸನೆಗೆ ಪಾತ್ರರಾದರೆ, ಉಪನಿಷತ್ತಿನ ಆತ್ಮ, ಬ್ರಹ್ಮ ಅಥವಾ ಪುರುಷ– ಈ ತತ್ತ್ವಗಳು ನಿರ್ಗುಣ, ನಿರಾಕಾರ ಉಪಾಸನೆಯನ್ನು ಪ್ರತಿಪಾದಿಸುತ್ತವೆ. ಈ ರೀತಿಯಲ್ಲಿ ತಾತ್ತ್ವಿಕ ದೃಷ್ಟಿಯಿಂದಲೂ, ಆಚರಣೆಯ ದೃಷ್ಟಿಯಿಂದಲೂ ಹಲವು ಬಗಯ ಸಾಧನೆಯ ಕ್ರಮಗಳು ನಮ್ಮಲ್ಲಿ ರೂಪುಗೊಂಡದ್ದು ಅತ್ಯಂತ ಪ್ರಾಚೀನ ಕಾಲದಲ್ಲಿ. ವೇದಾಂತ ದರ್ಶನವು ಈ ಎಲ್ಲ ವಿಧಾನಗಳನ್ನೂ ಸಮನ್ವಯಗೊಳಿಸಿ, ವಿವಿಧ ಮತ-ಪಂಥಗಳ ನಡುವೆ ಸಾಕಾರ-ನಿರಾಕಾರದ ಸಾಮರಸ್ಯವನ್ನು ಪ್ರತಿಷ್ಠಾಪಿಸಿ, ಭಾರತೀಯರಿಗೆ ಆಧ್ಯಾತ್ಮಿಕ ಮಾರ್ಗವನ್ನು ತೋರಿಸಿಕೊಟ್ಟಿದೆ.

ಈ ಎಲ್ಲ ಸಾಧನೆಗಳನ್ನು ಸಮನ್ವಯಗೊಳಿಸಲೆಂದೇ ಅವತರಿಸಿ ಬಂದವರು ಶ್ರೀರಾಮಕೃಷ್ಣರು. 'ಶ್ರೀರಾಮಕೃಷ್ಣ ವಚನವೇದ'ದ ಕರ್ತೃ ಹಾಗೂ ಶ್ರೀರಾಮಕೃಷ್ಣರ ನೇರ ಶಿಷ್ಯರಾದ 'ಮ' ಅಥವಾ ಮಹೇಂದ್ರನಾಥ ಗುಪ್ತರ ಮೊದಲ ಸಂದರ್ಶನದಲ್ಲೇ ಶ್ರೀರಾಮಕೃಷ್ಣರು ಈ ಸಮನ್ವಯ ಸಂದೇಶವನ್ನು ಅವನಿಗೆ ಸಾರಿದರು:

''ಒಂದರಲ್ಲಿ ವಿಶ್ವಾಸವಿದ್ದರೆ ಅದೇ ಯಥೇಷ್ಟ. ನಿರಾಕಾರದಲ್ಲಿ ವಿಶ್ವಾಸವೆ? ಬಹಳ ಒಳ್ಳೆಯದು. ಆದರೆ ಎಂದಿಗೂ ಹೀಗೆ ಯೋಚಿಸಬೇಡ – ಇದೇ ಕೇವಲ ಸತ್ಯ, ಉಳಿದುದೆಲ್ಲ ಮಿಥ್ಯಾ ಎಂದು. ತಿಳಿದುಕೊ – ನಿರಾಕಾರವೂ ಸತ್ಯ, ಸಾಕಾರವೂ ಸತ್ಯ. ಯಾವುದರಲ್ಲಿ ವಿಶ್ವಾಸವೊ ಅದರಲ್ಲಿ ದೃಢಬುದ್ಧಿ ಇಡು.''

*(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೯)*

ಮಾಸ್ಟರ್ ಮಹಾಶಯನ ಉದಾಹರಣೆಯಲ್ಲಿ, ಆಗಿನ ಕಾಲದ ಸುಶಿಕ್ಷಿತ ಜನರ ಮನಃಸ್ಥಿತಿ ಹೇಗಿತ್ತು ಎಂಬುದನ್ನು ನಾವು ಅರಿಯಬಹುದು. ಪ್ರಾಚೀನ ಕಾಲದಲ್ಲಿ ಸನಾತನ ಧರ್ಮವು ಸಮಗ್ರ ಮಾನವ ಜನತೆಗೆ ಉಪಯುಕ್ತವಾಗುವಂತೆ ಹಲವು ಬಗೆಯ ಆಧ್ಯಾತ್ಮಿಕ ಮಾರ್ಗಗಳನ್ನು ರೂಪಿಸಿತ್ತು. ಆದರೆ ಆಧುನಿಕ ವಿದ್ಯಾಭ್ಯಾಸದ ಪ್ರಭಾವದಿಂದಾಗಿ ವಿಚಾರ, ತರ್ಕ, ಪ್ರಶ್ನಿಸುವ ಮನೋಭಾವಗಳು ಬೆಳೆದು ಧರ್ಮದ ತಿರುಳನ್ನು ಅರ್ಥಮಾಡಿಕೊಳ್ಳುವುದರಲ್ಲಿ ವಿಫಲವಾಯಿತು. ಇಂಥ ಮನೋಭಾವಗಳನ್ನು ತಿದ್ದಿ, ಸರಿಯಾದ ದಾರಿಗೆ ತರುವ ಅಗತ್ಯವಿತ್ತು. ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಅನುಭವಗಳ ಹಿನ್ನೆಲೆಯಿಂದ ಮಡುಗಟ್ಟಿದ ಉಪದೇಶಗಳು ಈ ಕಾರ್ಯವನ್ನು ಅತ್ಯದ್ಭುತವೆನ್ನುವಂತೆ ಮಾಡಿದವು. ಮನುಕುಲದ ಮುಂದಿನ ಪೀಳಿಗೆಯ ಹಲವು ತಲೆಮಾರುಗಳಿಗೆ ಈ ಉಪದೇಶಗಳು ದಾರಿದೀಪದ ಹಾಗೆ ಬೆಳಕು ನೀಡುತ್ತವೆ.

### ಸೆಪ್ಟೆಂಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೩ | ಬುಧವಾರ | ಏಕಾದಶಿ |
| ೧೫ | ಸೋಮವಾರ | ಸ್ವಾಮಿ ಅಭೇದಾನಂದ ಜಯಂತಿ |
| ೧೭ | ಬುಧವಾರ | ಏಕಾದಶಿ |
| ೨೧ | ಭಾನುವಾರ | ಸ್ವಾಮಿ ಅಖಂಡಾನಂದ ಜಯಂತಿ |
| ೨೯ | ಸೋಮವಾರ | ಶ್ರೀ ದುರ್ಗಾಪೂಜೆ : ಮಹಾಸಪ್ತಮಿ |
| ೩೦ | ಮಂಗಳವಾರ | ಮಹಾಷ್ಟಮಿ |